# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2654\2015\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10.1.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ಬನವೇನಹಳ್ಳಿ ಗ್ರಾಮದ ಸ. ನಂ: 55ಕ್ಕೆ ಅರಣ್ಯ ಇಲಾಖೆಯಿಂದ ಕರಡಿಗಳ ದಾಳಿಯಿಂದ ಜಮೀನಿನ ಬೆಳೆಯನ್ನು ರಕ್ಷಿಸಲು ಸೋಲಾರ್ ತಂತಿ ಬೇಲಿ ಅಳವಡಿಸಿಕೊಡುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು.

*******

ಶ್ರೀಮತಿ.ಹೇಮಾವತಿ ಮಠದ ರಾಜಶೇಖರಯ್ಯ, ಬನವೇನಹಳ್ಳಿ ಗ್ರಾಮ, ವಡೇರಹಳ್ಳಿ ಅಂಚೆ ಮಧುಗಿರಿ ತಾಲ್ಲೂಕು. ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಶಿವಣ್ಣ ವಲಯ ಅರಣ್ಯಾಧಿಕಾರಿಗಳು, ಮಧುಗಿರಿ ವಲಯ, ಅರಣ್ಯಾಧಿಕಾರಿಗಳ ಕಛೇರಿ, ಮಧುಗಿರಿ ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಮಧುಗಿರಿ ತಾಲ್ಲೂಕು ಬನವೇನಹಳ್ಳಿ ಗ್ರಾಮದ ಸ. ನಂ: 55ರ ಜಮೀನಿನಲ್ಲಿ ದೂರುದಾರರ ಸಪೋಟ ಬೆಳೆಯು ಕರಡಿಗಳಿಂದ ಹಾನಿಯಾಗುತ್ತಿದ್ದು ಇದಕ್ಕೆ ಸೋಲಾರ್ ತಂತಿ ಬೇಲಿ ನಿರ್ಮಿಸಿ ಅಥವಾ ಶಾಶ್ವತ ಪರಿಹಾರ ನೀಡಿ ಅಂತ ಎದುರುದಾರರಿಗೆ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

2014ರಲ್ಲಿ ಸ್ವಲ್ಪ ಪರಿಹಾರ ನೀಡಿ ಕೈತೊಳೆದುಕೊಂಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತನಗೆ ನ್ಯಾಯದೊರಕಿಸಿಕೊಡಬೇಕೆಂದು ದೂರು ಸಲ್ಲಿಸಿದ್ದಾರೆ.

3)ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜಮೀನಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಾಗಿ 5 ಗಿಡಗಳಲ್ಲಿ ಒಂದೊಂದು ಕೊಂಬೆ ಮುರುದಿರುವುದು ಕಂಡುಬಂದಿದೆ, ಆ ಸಮಯದಲ್ಲಿ ಗಿಡಗಳಲ್ಲಿ ಹೂ ಮತ್ತು ಪೀಚುಗಳಾಗಿದ್ದು ತಿನ್ನಲು ಯೋಗ್ಯವಾಗಿಲ್ಲದ ಕಾರಣ ಕರಡಿಯ ದಾಳಿಯ ಸಾಧ್ಯತೆ ಇರುವುದಿಲ್ಲ. ಅರಣ್ಯ ಇಲಾಖೆ ಸಿಬ್ಬಂದಿಯು 4-5 ದಿನಗಳವರೆಗೆ ದೂರುದಾರರ ಜಮೀನಿನ ಸುತ್ತಮುತ್ತ ರಾತ್ರಿ ಗಸ್ತು ತಿರುಗಿ ನೋಡಲಾಗಿ ಕರಡಿಗಳ ಓಡಾಟ ಮತ್ತು ದಾಳಿ ಕಂಡುಬರುವುದಿಲ್ಲ. ಸೋಲಾರ್ ತಂತಿ ಬೇಲಿ ನಿರ್ಮಿಸಲು ಸರ್ಕಾರದ ಸುತ್ತೋಲೆಯಂತೆ ರಕ್ಷಿತ ಅರಣ್ಯ ಪ್ರದೇಶ ಪಕ್ಕದಲ್ಲಿ ಇರುವ ಒಂದು ಹೆಕ್ಟರ್‌ಗಿಂತ ಹೆಚ್ಚು ಜಮೀನು ಇದ್ದರೆ ಮಾತ್ರ ಸೋಲಾರ್ ತಂತಿಬೇಲಿ ನಿರ್ಮಿಸಿಕೊಡಲು ಅವಕಾಶ ಇರುತ್ತದೆ. ಆದರೆ ದೂರುದಾರರ ಜಮೀನು 1 ಹೆಕ್ಟರ್ ಗಿಂತ ಕಡಿಮೆ ಇರುವುದರಿಂದ ಅದು ಸಾಧ್ಯವಾಗುವುದಿಲ್ಲ ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4)ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) " ದೂರುದಾರರ ಜಮೀನು ಅರಣ್ಯ ಪ್ರದೇಶದ ಪಕ್ಕದಲ್ಲಿ ಇದೇ ಎನ್ನುವುದನ್ನು ಎದುರುದಾರರು ಅಲ್ಲಗಳೆದಿರುವುದಿಲ್ಲ ಆದರೆ ಈ ಜಮೀನಿನಲ್ಲಿರುವ ಸಪೋಟ ಬೆಳೆಯು ಹೂವಿನ ಹಂತದಲ್ಲಿರುವುದರಿಂದ ಕರಡಿಗಳು ದಾಳಿ ಮಾಡುವ ಸಾಧ್ಯತೆಯನ್ನು ಎದುರುದಾರರು ತಳ್ಳಿ ಹಾಕಿದ್ದಾರೆ. ಸರ್ಕಾರಿ ಸುತ್ತೊಲೆ ಪ್ರಕಾರ 1 ಹೆಕ್ಟರ್ ಗಿಂತ ಕಡಿಮೆ ಇರುವ

ಜಮೀನಿಗೆ ಸೋಲಾರ್ ತಂತಿ ಬೇಲಿಯನ್ನು ಅಳವಡಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ಸರ್ಕಾರದ ಸುತ್ತೋಲೆಯನ್ನು ನೀಡಿರುವುದಿಲ್ಲ. ಸ. ನಂ: 55 ಕ್ಷೇತ್ರ 2ಎ., ಇದ್ದು ಈ ಜಮೀನಿನಲ್ಲಿಯ ಕರಡಿ ದಾಳಿಯಿಂದ ಬೆಳೆ ಹಾಳಾದರೂ ಸಹ ದೂರುದಾರರಿಗೆ ನಷ್ಟು ಉಂಟಾಗುತ್ತದೆ. ಸಪೋಟ ಬೆಳೆಯು ಹಣ್ಣು ಬಿಟ್ಟಾಗ ಕರಡಿ ದಾಳಿ ಮಾಡುವ ಸಾಧ್ಯತೆ ಇರುತ್ತದೆ. ಅರಣ್ಯ ಇಲಾಖೆಯಿಂದ 1 ಹೆಕ್ಟರ್ ಗಿಂತ ಅಧಿಕ ಜಮೀನಿಗೆ ಸರ್ಕಾರ ದಿಂದ ಸೋಲಾರ್ ತಂತಿ ಅಳವಡಿಸಲು ಅವಕಾಶವಿರುವುದಾದರೆ ಅದನ್ನು ಚಿಕ್ಕ ಹಿಡುವಳಿದಾರರಾದ ದೂರುದಾರರ ಜಮೀನಿಗೆ ಅನ್ವಯಿಸುವುದು ಸೂಕ್ತವೆನಿಸುತ್ತದೆ.

6) ಈ ಪ್ರಕರಣದಲ್ಲಿ ಎದುರುದಾರರ ಯಾವುದೇ ಕರ್ತವ್ಯ ನಿರ್ಲಕ್ಷ್ಯ ಕಂಡುಬರದಿದ್ದರೂ ಸಹ ದೂರುದಾರರಿಗೆ ನ್ಯಾಯದೊರಕಿಸಿಕೊಡುವುದು ಉಚಿತವೆನಿಸುತ್ತದೆ. ಆದ್ದರಿಂದ ಬನವೇನಹಳ್ಳಿ ಗ್ರಾಮದ ಸ. ನಂ: 55ಕ್ಕೆ ಅರಣ್ಯ ಇಲಾಖೆಯಿಂದ ಕರಡಿಗಳ ದಾಳಿಯಿಂದ ಜಮೀನಿನ ಬೆಳೆಯನ್ನು ರಕ್ಷಿಸಲು ಸೋಲಾರ್ ತಂತಿ ಬೇಲಿ ಅಳವಡಿಸಿಕೊಡುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಹಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

7) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

10/1/18

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.